ಅಧ್ಯಕ್ಷರು: ಮಾನ್ಯ ಸದಸ್ಯರೆ, ಮಾನ್ಯ ಸಚಿವರು ಉತ್ತರ ಹೇಳುವಾಗ ಅಡ್ಡ ಪ್ರಶ್ನೆಗಳನ್ನು ಕೇಳುವುದು ಸರಿಯಲ್ಲ.

ಶ್ರೀ ಕೆ.ಶಿವಮೂರ್ತಿ: ದಯವಿಟ್ಟು ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ಕೊಡುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು: ರುದ್ರೇಶಗೌಡ ರವರು ಕೇಳಿರುವ ಪ್ರಶ್ನೆಗೆ ಉತ್ತರ ಬಂದಿಲ್ಲ. ಪುಟ್ಟಣ್ಣಯ್ಯ ರವರು ಸದನದಲ್ಲಿ ಹಾಜರಿಲ್ಲ. ನಾಗರಾಜಯ್ಯರವರು ಕೇಳಿರುವ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ. ರಾಜೀವ್‌ರವರು ಕೇಳಿರುವ ಪ್ರಶ್ನೆಗೆ 15 ದಿವಸ ಕಾಲಾವಕಾಶ ಕೇಳಿದ್ದಾರೆ.

ಉಡುಪಿ ಮತ್ತು ಬ್ರಹ್ಮಾವರದಲ್ಲಿ ಮಿನಿ ವಿಧಾನ ಸೌಧ

24(581); ಶ್ರೀ ಪ್ರಮೋದ ಮಧ್ವರಾಜ್ (ಉಡುಪಿ)

ಅ) ರಾಜ್ಯದಲ್ಲಿ ಈವರೆಗೆ ಎಷ್ಟು ಮಿನಿ ವಿಧಾನಸೌಧಗಳ ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗಿದೆ. ಅವುಗಳಿಗೆ ಖರ್ಚಾದ ಮೊತ್ತದ ವಿವರಗಳನ್ನು ತಾಲ್ಲೂಕುವಾರು ನೀಡುವುದು;

ಆ) ರಾಜ್ಯದಲ್ಲಿ ಎಷ್ಟು ಮಿನಿ ವಿಧಾನಸೌಧಗಳ ಕಾಮಗಾರಿ ಪ್ರಗತಿ ಹಂತದಲ್ಲಿದೆ (ತಾಲ್ಲೂಕುವಾರು ಅಂದಾಜು ಮೊತ್ತದ ವಿವರ ನೀಡುವುದು);

ಇ) ಉಡುಪಿ ಮತ್ತು ಬ್ರಹ್ಮಾವರದಲ್ಲಿ ಮಿನಿ ವಿಧಾನಸೌಧವನ್ನು ಕಟ್ಟಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರದಿಂದ ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ರಾಜ್ಯದಲ್ಲಿ ಈವರೆಗೆ 116 ಮಿನಿ ವಿಧಾನಸೌಧಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಅವುಗಳಿಗೆ ತಾಲ್ಲೂಕುವಾರು ಖರ್ಚಾದ ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ರಾಜ್ಯದಲ್ಲಿ 24 ಮಿನಿ ವಿಧಾನಸೌಧಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಹಾಗೂ 04 ಮಿನಿ ವಿಧಾನಸೌಧ ಕಟ್ಟಡಗಳ ಕಾಮಗಾರಿಯನ್ನು ನಿವೇಶನ ಲಭ್ಯವಿಲ್ಲದ ಕಾರಣ ಪ್ರಾರಂಭಿಸುವುದಿಲ್ಲ ತಾಲ್ಲೂಕುವಾರು ಅಂದಾಜು ಮೊತ್ತದ ವಿವರವನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ.

ಇ) ಉಡುಪಿ ತಾಲ್ಲೂಕು ಮಿನಿ ವಿಧಾನಸೌಧ ಕಾಮಗಾರಿಯ `10.00 ಕೋಟಿಗಳ ಅಂದಾಜುಪಟ್ಟಿ ಮತ್ತು ನಕ್ಷೆ ಸ್ವೀಕೃತವಾಗಿದ್ದು, ಸದರಿ ಕಾಮಗಾರಿಯನ್ನು ಆರ್ಥಿಕ ಇಲಾಖೆಯ ಅಭಿಪ್ರಾಯದಂತೆ ರೂ.5.00 ಕೋಟಿಗಳಲ್ಲಿ ನಿರ್ವಹಿಸಲು ಪರಿಷ್ಕರಿಸಿದ ಅಂದಾಜುಪಟ್ಟಿ ಮತ್ತು ನಕ್ಷೆಯನ್ನು ಸಲ್ಲಿಸುವಂತೆ ಕೋರಿ ಜಿಲ್ಲಾಧಿಕಾರಿ, ಉಡುಪಿ ಇವರಿಗೆ ದಿನಾಂಕ: 20/01/2013 ರಂದು ಪತ್ರ ಬರೆಯಲಾಗಿದೆ.

ಬ್ರಹ್ಮಾವರ ತಾಲ್ಲೂಕು ಕೇಂದ್ರವಾಗಿಲ್ಲದೆ ಇರುವುದರಿಂದ ಬ್ರಹ್ಮಾವರದಲ್ಲಿ ಮಿನಿ ವಿಧಾನಸೌಧ ನಿರ್ಮಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರಿಂದ ಪರಿಷ್ಕೃತ ಅಂದಾಜು ಪಟ್ಟಿ ಮತ್ತು ನಕ್ಷೆ ಸ್ವೀಕೃತವಾದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಕ್ರಮಕೈಗೊಳ್ಳಲಾಗುವುದು.

ಅನುಬಂಧ–1

ಪೂರ್ಣಗೊಂಡ ಮಿನಿ ವಿಧಾನಸೌಧ ಕಟ್ಟಡ ಕಾಮಗಾರಿಗಳ ವಿವರ

ಕ್ರಮ ಸಂಖ್ಯೆ	ಸ್ಥಳ/ ತಾಲ್ಲೂಕು	ಅಂದಾಜು ಮೊತ್ತ	ಖರ್ಚಾದ ಮೊತ್ತ
1	ಬೆಂಗಳೂರು ಪೂರ್ವ	375.00	495.00
2	ಆನೇಕಲ್	28.00	28.00
3	ಹೊಸಕೋಟೆ	65.00	72.00
4	ನೆಲಮಂಗಲ	48.00	48.18
5	ದೇವನಹಳ್ಳಿ	440.00	444.13
6	ದೊಡ್ಡಬಳ್ಳಾಪುರ	110.00	100.62
7	ತುಮಕೂರು	95.00	147.22
8	ಚಿಕ್ಕನಾಯಕನಹಳ್ಳಿ	13.00	13.00
9	ಗುಬ್ಬಿ	49.00	71.63
10	ಮಧುಗಿರಿ	45.00	70.48
11	ತುರವೇಕೆರೆ	45.00	66.16
12	ಕೊರಟಗೆರೆ	200.00	144.54
13	ಪಾವಗಡ	40.00	35.42
14	ರಾಮನಗರ	500.00	586.02
15	ಚನ್ನಪಟ್ಟಣ	300.00	236.45
16	ಮಾಗಡಿ	80.00	85.40
17	ಕನಕಪುರ	23.70	24.10

18	ಬಂಗಾರಪೇಟೆ	230.00	122.23
19	ಶ್ರೀನಿವಾಸಪುರ	45.00	51.29
20	ಮಾಲೂರು	75.00	75.10
21	ಶಿಡ್ಲಘಟ್ಟ	48.00	48.00
22	ಚಿಂತಾಮಣಿ	36.60	36.60
23	ಬಾಗೇಪಲ್ಲಿ	60.00	60.00
24	ಮೈಸೂರು	820.00	727.60
25	ಟಿ.ನರಸೀಪುರ	300.00	141.10
26	ಮಂಡ್ಯ	100.00	292.00
27	ಮದ್ದೂರು	45.00	80.24
28	ಮಳವಳ್ಳಿ	45.00	142.00
29	ಕೆ.ಆರ್.ಪೇಟೆ	380.00	435.00
30	ಶ್ರೀರಂಗಪಟ್ಟಣ	500.00	487.85
31	ಪಾಂಡವಪುರ	89.00	111.87
32	ನಾಗಮಂಡಲ	525.00	601.25
33	ಚಾಮರಾಜನಗರ	17.00	20.92
34	ಗುಂಡ್ಲುಪೇಟೆ	172.00	169.59
35	ಕೊಳ್ಳೆಗಾಲ	55.00	70.78
36	ಯಳಂದೂರು	45.00	62.69
37	ಹಾಸನ	26.00	26.50
38	ಚನ್ನರಾಯಪಟ್ಟಣ	500.00	447.89

39	ಹೊಳೇನರಸೀಪುರ	25.00	30.26
40	ಬೇಲೂರು	45.00	45.90
41	ಅರಸೀಕೆರೆ	85.00	83.80
42	ಸಕಲೇಶಪುರ	200.00	282.05
43	ಆಲೂರು	200.00	273.19
44	ನರಸಿಂಹರಾಜಪುರ	250.00	310.78
45	ಭದ್ರಾವತಿ	350.00	370.78
46	ತೀರ್ಥಹಳ್ಳಿ	45.00	32.15
47	ಶಿಕಾರಿಪುರ	45.00	45.15
48	ಹೊಳಲ್ಕೆರೆ	40.00	78.00
49	ಹೊಸದುರ್ಗ	40.00	37.26
50	ಹಿರಿಯೂರು	50.00	47.17
51	ಚಳ್ಳಕೆರೆ	38.50	56.63
52	ಹೊನ್ನಾಳಿ	45.00	67.09
53	ಚನ್ನಗಿರಿ	45.00	86.20
54	ಜಗಳೂರು	40.00	62.40
55	ಮಂಗಳೂರು	350.00	271.96
56	ಸುಳ್ಯ	200.00	221.21
57	ಪುತ್ತೂರು	349.00	351.51
58	ಕಾರ್ಕಳ	80.00	153.00
59	ಗಂಗಾವತಿ	150.00	137.59

60	ಕುಷ್ಟಗಿ	150.00	123.87
61	ಹಾವೇರಿ	125.00	122.65
62	ಬ್ಯಾಡಗಿ	200.00	188.52
63	ಹಿರೆಕೆರೂರು	130.55	107.63
64	ಶಿಗ್ಗಾಂವ್	200.00	189.09
65	ಮುಂಡರಗಿ	183,86	183.73
66	ಬೀಳಗಿ	183.50	186.40
67	ಬಾದಾಮಿ	189.00	183.03
68	ಹುನಗುಂದ	245.00	237.59
69	ಬಸವಕಲ್ಯಾಣ	225.00	220.94
70	ಔರಾದ್	229.00	220.63
71	ಬಾಲ್ಕಿ	220.00	218.21
72	ಹುಮ್ನಾಬಾದ್	200.00	194.55
73	ತೀರ್ಥಹಳ್ಳಿ	100.00	87.23
74	ಶಿಕಾರಿಪುರ	100.00	92.89
75	ಗುಂಡ್ಲುಪೇಟೆ	30.00	28.95
76	ರಾಯಬಾಗ್	255.35	254.97
77	ಚಿಕ್ಕೋಡಿ	300.00	284.90
78	ರಾಮದುರ್ಗ	390.35	359.36
79	ಗೋಕಾಕ್	269.00	252.18
80	ಖಾನಾಪುರ	200.00	200.10

81	ಹೊಸಪೇಟೆ	240.50	242.27
82	ಹರಪ್ಪನಹಳ್ಳಿ	175.00	156.69
83	ಬಸವನ ಬಾಗೇವಾಡಿ	392.00	381.73
84	ಬಿಜಾಪುರ	200.00	207.92
85	ಹುಬ್ಬಳ್ಳಿ	637.40	629.55
86	ಹಳಿಯಾಳ	200.00	200.68
87	ಶಹಾಪುರ	200.00	199.55
88	ಶಿವಮೊಗ್ಗ	648.90	657.51
89	ರಾಯಚೂರು	200.00	197.11
90	ದೇವದುರ್ಗ	200.00	194.10
91	ಸಿರಗುಪ್ಪ	200.00	199.27
92	ರೋಣ	221.50	211.47
93	ಹೊಸನಗರ	200.00	194.98
94	ಸುರಪುರ	200.00	200.00
95	ಅಥಣಿ	230.00	226.95
96	ನರಗುಂದ	253.08	269.28
97	ಕೆ.ಆರ್.ನಗರ	250.00	240.83
98	ಪಿರಿಯಾಪಟ್ಟಣ	250.00	241.82
99	ಚಿಕ್ಕಬಳ್ಳಾಪುರ	400.00	371.54
100	ಗುಡಿಬಂಡೆ	275.00	240.84

101	ಧಾರವಾಡ	170.00	185.04
102	ಕಲಘಟಗಿ	21.41	21.41
103	ಕುಂದಗೋಳ	30.50	30.50
104	ನವಲಗುಂದ	96.50	105.00
105	ಹಾನಗಲ್	300.00	255.24
106	ಹೀರೆಕೆರೂರು	50.00	42.21
107	ರಾಣೇಬೆನ್ನೂರು	50.00	97.51
108	ಸವಣೂರು	100.00	99.68
109	ಅಂಕೋಲಾ	200.00	211.54
110	ಶಿರಸಿ	200.00	201.54
111	ಹುಕ್ಕೇರಿ	75.00	72.63
112	ಮುದ್ದೇಬಿಹಾಳ	100.00	162.51
113	ಹಡಗಲಿ	313.34	298.80
114	ಚಿಂಚೋಳಿ	30.00	12.06
115	ಯಾದಗಿರಿ	176.00	48.35
116	ಜೇವರ್ಗಿ	400.00	350.00

ಅನುಬಂಧ-2

ಪ್ರಗತಿಯಲ್ಲಿರುವ ಮಿನಿ ವಿಧಾನಸೌಧ ಕಾಮಗಾರಿಗಳ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಮಂಜೂರಾದ ಮೊತ್ತ
1	ಕೋಲಾರ	500.00
2	ಕುಣಿಗಲ್	200.00
3	ಹೆಚ್.ಡಿ.ಕೋಟೆ	620.00
4	ಚಿಕ್ಕಮಂಗಳೂರು	249.00
5	ಕೊಪ್ಪ	400.00
6	ಮಂಗಳೂರು	400.00
7	ಪುತ್ತೂರು	450.00
8	ಕುಂದಾಪುರ	315.00
9	ವೀರಾಜಪೇಟೆ	200.00
10	ಮುಂಡಗೋಡ	300.00
11	ಹುಕ್ಕೇರಿ	100.00
12	ಮುದೋಳ್	200.00
13	ಯಲಹಂಕ(ಬೆಂಗಳೂರು ಉತ್ತರ)	800.00
14	ಮುಂಡಗೋಡ	250.00
15	ಹರಿಹರ	250.00
16	ಲಿಂಗಸಗೂರು	250.00
17	ಸಿಂದನೂರು	250.00

18	ಜಮಖಂಡಿ	451.00
19	ಬಾಗಲಕೋಟೆ (ನವನಗರ)	499.00
20	ಚಿಂತಾಮಣಿ	250.00

ಕ್ರಮ ಸಂಖ್ಯೆ	ತಾಲ್ಲೂಕು	ಮಂಜೂರಾದ ಮೊತ್ತ	ಖರ್ಚಾದ ವೆಚ್ಚ
21	ಕೂಡ್ಲಗಿ	250.00	ಸರ್ಕಾರದ ಆದೇಶ ಸಂಖ್ಯೆ:- ಕಂಇ 66 ಡಬ್ಲ್ಯೂಬಿಆರ್ 2009, ದಿನಾಂಕ: 27/3/2010 ರ ಆದೇಶದಲ್ಲಿ ಈ ಕಾಮಗಾರಿಗಳನ್ನು ಕರ್ನಾಟಕ ಗೃಹ ಮಂಡಳಿಯವರಿಗೆ ವಹಿಸಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಪ್ರತಿ ತಾಲ್ಲೂಕಿಗೆ ₹.100.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದ್ದು, ನಿವೇಶನ ಲಭ್ಯವಿಲ್ಲದ ಕಾರಣ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದಿಲ್ಲ.
22	ಹಗರಿಬೊಮ್ಮನಹಳ್ಳಿ	250.00	
23	ಬಳ್ಳಾರಿ	250.00	
24	ಚಿತ್ರದುರ್ಗ	250.00	

ಶ್ರೀ. ಪ್ರಮೋದ್ ಮಧ್ವರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಲ ಸಂಪನ್ಮೂಲ ಸಚಿವರು ಉತ್ತರವನ್ನು ಓದಗಿಸಿದ್ದಾರೆ. ಉಡುಪಿ ತಾಲ್ಲೂಕಿನಲ್ಲಿ ಎರಡೂವರೆ ವಿಧಾನಸಭಾ ಕ್ಷೇತ್ರ ಬರುತ್ತದೆ. ಉಡುಪಿ ತಾಲ್ಲೂಕು ಕೊಡಗು ತಾಲ್ಲೂಕಿಗಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಇಲ್ಲಿನ ಮಿನಿ ವಿಧಾನಸೌಧ ನಿರ್ಮಾಣಕ್ಕೆ 10 ಕೋಟಿ ರೂಪಾಯಿಗಳವರೆಗೆ drawing ಮಾಡಿ ಕಳುಹಿಸಿದ್ದರೆ ಅದನ್ನು ಐದು ಕೋಟಿ ರೂಪಾಯಿಗಳಿಗೆ ಇಳಿಸುವ

ಸಾಧ್ಯತೆಯಿದೆಯೆಂಬ ಉತ್ತರ ಬಂದಿದೆ. ಉಡುಪಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಜನಸಂಖ್ಯೆಯಿರುವ ಕಾರಣ 10 ಕೋಟಿ ರೂಪಾಯಿಗಳ ವಿನ್ಯಾಸವನ್ನೇನು ಮಾಡಿದ್ದೇವೆ, ಅದನ್ನೇ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಾ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ. ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಯ ವತಿಯಿಂದ ಕರ್ನಾಟಕ ರಾಜ್ಯದಲ್ಲಿ 176 ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧಗಳನ್ನು ಕಟ್ಟಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಅದೇ ರೀತಿ 30 ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಸಂಕೀರ್ಣಗಳು ಬರಬೇಕೆಂದು ಮಾಡಿದ್ದೇವೆ. ಈಗಾಗಲೇ ರಾಜ್ಯದಲ್ಲಿ ಈವರೆಗೆ 116 ಮಿನಿ ವಿಧಾನಸೌಧಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, 24 ಮಿನಿ ವಿಧಾನಸೌಧಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಇನ್ನು 4 ಮಿನಿ ವಿಧಾನಸೌಧ ಕಟ್ಟಡಗಳ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಅದಕ್ಕೆ ನಿವೇಶನ ಲಭ್ಯವಿಲ್ಲವೆಂಬ ಉತ್ತರ ಬಂದಿದೆ. ತಾವು ಪ್ರಮುಖವಾಗಿ ಉಡುಪಿ ಜಿಲ್ಲೆಯ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ, ಉಡುಪಿ ಜಿಲ್ಲೆಗೆ ಅಂದಾಜು ಮೊತ್ತವನ್ನು ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದು, 5 ಕೋಟಿ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಪರಿಷ್ಕೃತ ಅಂದಾಜು ಜಿಲ್ಲಾಧಿಕಾರಿಗಳಿಂದ ಬಂದ ಕೂಡಲೇ ಉಳಿದ ಹಣ ಬಿಡುಗಡೆ ಮಾಡುತ್ತೇವೆ. ಇದಕ್ಕೆ Actrulristrative approval ಸಹ ಆಗಿದೆ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಕಾಲ ಮಿತಿಯೊಳಗೆ ಇಡೀ ರಾಜ್ಯದಲ್ಲಿರುವ ಮಿನಿ ವಿಧಾನಸೌಧಗಳ ಕಾಮಗಾರಿಗಳ ಕಾರ್ಯ ಪೂರ್ಣಗೊಳಿಸಬೇಕು,

ಅಧ್ಯಕ್ಷರು : ಆ ಪ್ರಶ್ನೆ ಇಲ್ಲಿ ಬರುವುದಿಲ್ಲ,

ಶ್ರೀ ಸಿ.ಟಿ.ರವಿ : ನನ್ನ ಮತಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಹಾಗೆಯೇ ಇದ್ದು, ಈ ಬಗ್ಗೆ ಮಾನ್ಯ ಸಚಿವರ ಹತ್ತಿರ ವೈಯಕ್ತಿಕವಾಗಿ ಮಾತನಾಡಿದ್ದೇನೆ. ಇಡೀ ರಾಜ್ಯದಲ್ಲಿರುವ ಮಿನಿ ವಿಧಾನಸೌಧಗಳನ್ನು

ಕಾಲಮಿತಿಯೊಳಗೆ ಮುಗಿಸುವುದಕ್ಕೆ ಆದ್ಯತೆ ಮೇಲೆ ಕ್ರಮ ತೆಗೆದುಕೊಂಡು ಕೆಲಸ ಮಾಡಿಸಬೇಕು. ಒಂದು ವೇಳೆ ಆ ರೀತಿ ಮಾಡದಿದ್ದರೆ, ಪಂಚವಾರ್ಷಿಕ ಯೋಜನೆಗಳು ದಶ ವಾರ್ಷಿಕ ಯೋಜನೆಗಳಾಗುತ್ತವೆ.

ಅಧ್ಯಕ್ಷರು : ಈಗಾಗಲೇ ಪ್ರಾರಂಭ ಮಾಡಿರುವ ಮಿನಿ ವಿಧಾನಸೌಧ ಕಾಮಗಾರಿಗಳ ಕೆಲಸ ಕಾಲಮಿತಿಯೊಳಗೆ ಪೂರೈಸುತ್ತೀರಾ ಎಂದು ಕೇಳುತ್ತಿರುವುದು,

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಮಾನ್ಯ ಸದಸ್ಯರಾದ ಸಿ.ಟಿ.ರವಿ ಅವರ ಹತ್ತಿರ ಮಾತನಾಡಿದ್ದೇನೆ. ನಮ್ಮ ಹತ್ತಿರ ಹಣವೂ ಇದೆ. ಆದಷ್ಟು ಬೇಗನೆ ಹಣ ಬಿಡುಗಡೆ ಮಾಡಿ ಕಟ್ಟಡಗಳ ಕೆಲಸ ಮುಗಿಸುತ್ತೇವೆ.

ನಮೂನೆ 50 ಮತ್ತು 53 ಅಕ್ರಮ ಸಕ್ರಮ ಯೋಜನೆ

25(271); ಶ್ರೀ ವಿಶ್ವನಾಥ ಎಸ್.ಆರ್ (ಯಲಹಂಕ)

ಅ) ಅಕ್ರಮ ಸಕ್ರಮ ಯೋಜನೆಯಲ್ಲಿ ಅಕ್ರಮ ಸಾಗುವಳಿ ಜಮೀನನ್ನು ಸಕ್ರಮ ಮಾಡುವ ನಮೂನೆ 50 ಮತ್ತು 53ನ್ನು ನಿಗದಿತ ಅವಧಿಯಲ್ಲಿ ರೈತರು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಹಿಂದೆ ಬೆಂಗಳೂರು ಬಿ.ಬಿ.ಎಂ.ಪಿ ವ್ಯಾಪ್ತಿಯಿಂದ 18 ಕಿ.ಮೀ ನಂತರ ಬರುವ ಅಕ್ರಮ ಜಮೀನುಗಳನ್ನು ಸಕ್ರಮ ಮಾಡಲು ಸಮಿತಿಗಳಲ್ಲಿ ಬಾಕಿ ಉಳಿಸಿಕೊಳ್ಳಲು ಕಾರಣಗಳೇನು;

ಇ) ಬಾಕಿ ಉಳಿದ ಪ್ರಕರಣಗಳಿದ್ದರೂ ಸರ್ಕಾರದ ಆದೇಶದಲ್ಲಿ 25ಕಿ.ಮೀ ನಂತರದ ಪ್ರಕರಣಗಳನ್ನು ಮಾತ್ರ ಪರಿಗಣೀಸಬೇಕೆಂದು ಆದೇಶ ನೀಡಿರುವುದರಿಂದ 30–40 ವರ್ಷಗಳಿಂದ ಸಾಗುವಳಿ ಮಾಡುತ್ತಾ ಬರುತ್ತಿರುವ ರೈತರಿಗೆ ಅನ್ಯಾಯವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಇಂತಹ ರೈತರಿಗೆ ಅನುಕೂಲ ಮಾಡುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;